RegdNo B G155

Sri (130) 2

14—7—1955

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆಸರಸ್ವೇದಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2

ಪಿತ್ತಹತ್ತ

ಕೆಲವು ದಿವಸಗಳ ಹಿಂದೆ ಹೌರಾದ ಸಾಂಪ್ರದಲ್ಲಿ ಕಂಜಿಜಿಹಾರಿ ಪುಂಡಲ್ ಎಂಬಾತನನ್ನು ಆತನ ಮಗ ಕೊಲೆ ಮಾಡಿದ ವಾರ್ತೆ ಎ ಬಿ ಪತ್ರಿಕೆಯಲ್ಲಿ ಪ್ರಕಟವಾಯಿತು. ತನ್ನ ತೌಮನೆಗೇ ಹೊಂಟು ಹೊಂಟು ಹೋಗಿದ್ದ ತನ್ನ ಸೊಸೆಯ ತನ್ನ ಮನೆಗೆ ಬರುವ ವಿಷಯದಲ್ಲಿ ಇಚ್ಛೆಯಿಲ್ಲದ ಆ ಹೆಂಡತಿಯೊಡನೇ ತಾನು ಜೀವಿಸಬೇಕೆಂದು ಮಗ ಎಷ್ಟು ಹೇಳಿದರೂ ಕೇಳಲಿಲ್ಲ : ಅದಕ್ಕಾಗಿ ಮಗ ತಂದೆಯನ್ನು ಕೊಂದೇ ಹಾಕಿದ!

‡ ನಮ್ಮ ಕೇಳುತನ ಎಷ್ಟಕ್ಕಿಳಿದಿದೆ ; ತಂದೆಯು ಕೊಲೆಯು ಅಲ್ಪ ವಿಷಯವಾಗಿ ಪರಿಣಮಿಸಿದೆ ; ಅಯ್ಯೋ ನಮ್ಮ ಸ್ಥಿತಿ ಎಷ್ಟು ಹೀನವಾಗಿದೆ. — Truth

★

ಭಾರತಕ್ಕೆ ಗೋಧಿ

ವಾಷಿಂಗ್ಟನ್— ಭಾರತವು ಅಮೇರಿಕಾ ಪಿ ಎಲ್ 480 ರಂತೆ 21907790 ಡಾಲರುಗಳ ಬೆಲೆಯ 370000 ಟನ್ ಗೋಧಿ ಪಡೆಯಲಿದೆ.

ಕನ್ನಡಾಡಿಯಲ್ಲಿ

ಮೈಸೂರು — ಕೆ ಆರ್ ಸಾಗರದಲ್ಲಿ ನೀರಿನ ದಾಸ್ತಾನು ಅಷ್ಟು ಉತ್ತಮ ಗೊಂಡಿಲ್ಲ.

ಕನ್ನಡ ಅಸಸ್ಥಲಿ

ಬೆಂಗಳೂರು— ಇಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ಈ ವರ್ಷ ಕನ್ನಡ ಅಸಸ್ಥೆ ಕೋರ್ಸನ್ನು ತೆರೆಯಲಾಗುವುದೆಂದು ಹೇಳಲಾಗಿದೆ.

★

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ

ಅಸ್ಥಾನವಿದ್ವಾನ್ ಧರ್ಮಾಧಿಕಾರಿ ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ವನ್ಮಣಿ ಸಂಪತ್ಕೃಷ್ಣಜೋಯಿಸರಿಂದ

15 ಗುರುವಾರ ಬಿದಿಗೆ ಶ್ರವಣ

ಹಿಂದಿಯ ಪರ ಜನಸಂಘದ ನಿರ್ಣಯ

ಜಬಲಪುರ— 1965 ನೇ ಜನವರಿ 26 ರಿಂದ ಹಿಂದಿಯು ದೇಶದ ಅಧಿಕೃತ ಭಾಷೆಯೆಂದು ಸರಕಾರ ಘೋಷಿಸಬೇಕೆಂದೂ ಕೇಂದ್ರ ಸರಕಾರಿಂದ ವಿಜ್ಞಾನಗಳಲ್ಲಿ ಅದು ಉಪಯೋಗದ ಮೇಲೆ ಯಾವ ನಿರ್ಬಂಧವೂ ಕೂಡದೆಂದೂ ಜನ ಸಂಘದ ನ್ಯಾಷನಲ್ ಎಕ್ಸಿಕ್ಯುಟಿವ್ ನಿರ್ಣಯ ಮಾಡಿದೆ

★

ರಹಸ್ಯ ಹೊರಬಿದ್ದಿದ್ದಕ್ಕೆ

ನವದೆಹಲಿ— ಭಾರತದ ಅಣು ನೀತಿಯ ರಹಸ್ಯ ಹೊರಬಿದ್ದ ಸಂದರ್ಭದಲ್ಲಿ ಒಬ್ಬನ ದಸ್ತಗಿರಿಯಾಗಿದೆ

★

ಪ್ರವಾಹದ ಹಾವಳಿ

ಪಿಲಾಂಗು— ಬ್ರಹ್ಮಪುತ್ರದ ಪ್ರವಾಹವು ವಿಪರೀತ ಮಳೆಯಿಂದ ಬಹಳ ಹೆಚ್ಚಿ, ಜೋರಹತ್ ಸಬ್ ಡಿವಿಜನ್ನಿನಲ್ಲಿ ದಡವೆಲ್ಲ ಒಡೆಯುತ್ತಾ, ಅನೇಕ ಗ್ರಾಮಗಳು ನೀರಿನಲ್ಲಿ ಮುಳುಗಿವೆ.

★

ಜೀವ ಉಳಿಸುವ ಮದ್ದು

ಪಾಟ್ನಾ— ಕೋರೋಮಿಸಟೈನ್ ಎಂಬ ಜೀವವುಳಿಸುವ ಮದ್ದು ಕಲ್ಕತ್ತಾದಲ್ಲೂ ಕೂಡ ಇಲ್ಲ ; ಜ್ವಾಸನತಪ್ಪಿ ಬಿದ್ದಿರುವ ಬೀಹಾರು ಚೀಫ್ ಸೆಕ್ರೆಟರಿಗೆ ಈ ಔಷಧ ಕೊಡಬೇಕೆಂದು ತರಲು ಕಲ್ಕತ್ತಾಕ್ಕೆ ಬಿಹಾರು ಸರಕಾರಿಂದ ವಿಮಾನ ಕಳುಹಿಸಿದ್ದರು : ಆದರೂ ಇಲ್ಲ ; ಹಂಚಿಕದಾರರಿಂದ ಸ್ವಲ್ಪ ಟಿದೊರೆಯಿತು ಆದರೆ ಪ್ರಯೋಜನವಿಲ್ಲ !

ಕಾಮನ್ವೆಲ್ತ್ ವಿದ್ಯಾರ್ಥಿಗಳ ಪ್ರವಾಸ

ಲಂಡನ್— ಬ್ರಿಟಿಷ್ ಕಾಮನ್ವೆಲ್ತ್ ವಿದ್ಯಾರ್ಥಿಗಳು 3 ತಾವಿಂ ದ್ಯೆಲಿ ಪ್ರವಾಸ ಕೈಗೊಂಡು 5 ಕೋಚುಗಳಲ್ಲಿ ಬರುವರು : 140 ಹುಡುಗರೂ 70 ಹುಡುಗಿಯರೂ ಇರುವರು : ಅವ್ರತ್ರೆ ಬ್ಯಾಂಕು ಪೋಸ್ಟಾಫೀಸು ಸಾಂದರ್ಭಿಕ ಸೆಲೂನು ಎಲ್ಲಾ ಇರುವವು ; ಈ ಪ್ರವಾಸ ಪಟ್ಟಿಯಲ್ಲಿ ಭಾರತ ಆಸ್ಟ್ರೇಲಿಯ ಟ್ರಿನಿಡಾಡು ಕೆನಡಾ ಮತ್ತು ಬ್ರಿಟನ್ನಿನವರು ; ಪ್ರವಾಸ ಪ್ರಾರಂಭ 30 ನೇ ಜುಲೈ.

★

ಯಾತ್ರಿಕರಿಗೇ ಬಿಡಿ

ತಿರುಪತಿ— ಪೂಜಿ ಜಾಗಕ್ಕೆ ಬರುವ ಪರಿಷತ್ತಲ್ಲದೆ ಬಂದೇಕೆಂಬ ನಿಯಮ ಬೇಡವೆಂದೂ, ಯಾತ್ರಿಕರಿಗೇ ಈ ವಿಷಯ ಬಿಡಲ್ಪಡಲೆಂದೂ ಆಂಧ್ರ ಮುಖ್ಯ ಮಂತ್ರಿ ಶ್ರೀ ಬ್ರಹ್ಮಾನಂದ ರೆಡ್ಡಿ ಹೇಳಿದರು

★

ಸೊಳ್ಳೆ ಕಾಟ ತಪ್ಪಿಸಲು

ತಿರುವನಂತಪುರಂ— ಸೊಳ್ಳೆ ಹಾವಳಿ ತಪ್ಪಿಸುವ ಕಾರ್ಯಕ್ರಮಕ್ಕಾಗಿ ರಾಜ್ಯದ ಯಾವ ಸ್ವಶಿಕ್ಷಣ ಸಂಸ್ಥೆಗೂ ರೂ 75 ತಾವಿಂದವರೆಗೂ ಗ್ರಾಂಟ್ ಕೊಡಲು ಸರಕಾರ ನಿರ್ಧರಿಸಿದೆ

★

ಕೊಯಮತ್ತೂರು— ತಮಿಳು ಮಾಧ್ಯಮ ವಾಕ್ಯವು ಇನ್ನೂ ಸಕಾರ್ಯವಾಗಿಲ್ಲವೆಂದು ಹೇಳಲಾಗಿದೆ

ಷೇಕ್ ಅಬ್ದುಲ್ಲ

ನವದೆಹಲಿ— ಊಟಿಯಲ್ಲಿ ಡಲಾಗಿದ್ದ ಷೇಕ್ ಅಬ್ದುಲ್ಲರನ್ನು ಕೊಡೈಕಾನಲ್ಲಿ ಡಲಾಗುವುದು

★

ಎಂಟು ಸಹಕಾರ ಸಂಘಗಳು

ಬೆಂಗಳೂರು— ರಾಜ್ಯದ 22 ಸಹಕಾರ ಸಂಘಗಳಲ್ಲಿ ರೂ 195404 ರಷ್ಟು ಹಣ ಮತ್ತು ಪದಾರ್ಥಗಳು ದುರುಪಯೋಗ ಪಡಿಸಿಕೊಳ್ಳಲಾಗಿದೆಯೆಂದು ಪ್ರಕಟವಾಗಿದೆ.

ಒಪ್ಪಂದದ ನ್ಯಾಯಬದ್ಧತೆ ಕುರಿತ

ಅಡ್ವೊಕೇಟು ಭಟ್ಟಂ ರಿಟ್ ಅರ್ಜಿ ಬೊಂಬಾಯಿ ಹೈಕೋರ್ಟಿನಲ್ಲಿ ವಜಾಆಯಿತು.

★

ಅನಾಹುತ

ಕಲ್ಕತ್ತಾ— ಒಂದು ಲಾರಿಯು ಒಂದು ಕೈಗಾಡಿಗೆ ಡಿಕ್ಕಿ ಹೊಡೆದು, ಒಂದು ಟ್ಯಾಕ್ಸಿ, ಒಂದು ಜೀಪು, ಒಂದು ಟ್ಯಾಕ್ಸಿಗೆ ಒಡಿದು ಜಖಂಗೊಳಿಸಿ, ನಂತರ ಮೂವರು ಪದದಚಾರಿಗಳ ಮೇಲೆ ಹರಿದು, ನಂತರ ಒಂದು ಮರಕ್ಕೆ ಹೊಡೆದು ನಿಂತಿತು — ಗಾಯಗೊಂಡಿರುವ ಡ್ರೈವರು ದಸ್ತಗಿರಿ ಮಾಡಲ್ಪಟ್ಟಿರುವನು

★

ಗೋವಾ

ನವದೆಹಲಿ— ತಾ || 24 ರಂದು ಗೋವಾದ ಸ್ಥಾನಮಾನ ವಿಷಯವನ್ನು ಪ್ರಧಾನಿ ಶಾಸ್ತ್ರಿಗಳು ನಿರ್ಧರಿಸುವರೆಂದು ನಂದಿಯಾಗಿದೆ

ಆಹಾರ ಸಮಸ್ಯೆ

(ಲೇಖಕರು— ಶ್ರೀ ಅನಂತನರಸಿಂಹಯ್ಯಂಗಾರ್, ಹೊಂಗನೂರು)

ಈಗ ಎಲ್ಲಾ ಕಡೆಯೂ ಆಹಾರದ ವಿಷಯವಾಗಿಯೇ ಮಾತುಗಳು ನಡೆಯುತ್ತಲಿರುತ್ತದೆ, ಜನಗಳು ದಿನಕ್ಕೊಂದು ಊಟ ಕೂಡ ದೊರಕದೆಂದೂ ಪರಿತಪಿಸುತ್ತಿದ್ದರೆ ಪತ್ರಿಕೆಗಳಲ್ಲಿ ಮಂತ್ರಿಗಳು ಆಹಾರ ವಿಷಯವಾಗಿ ಮಾಡಿದ ಭಾಷಣಗಳನ್ನು ಪ್ರಾಮುಖ್ಯವಾಗಿ ಪ್ರಕಟಿಸುತ್ತವೆ : ಭಾಷಣಗಳಲ್ಲಿ, ಚರ್ಚಾ ಕೂಟಗಳಲ್ಲಿ, ಹಂಟೆಗಳಲ್ಲಿ ಪ್ರತಿಯೊಂದರಲ್ಲಿಯೂ ಆಹಾರ ಸಮಸ್ಯೆಗೇ ಪ್ರಮುಖ ಭಾಗವನ್ನು ಕೊಡಲಾಗಿದೆ : ಮಂತ್ರಿಗಳು ಅನೇಕ ಆಶ್ವಾಸನೆಗಳನ್ನು ನೀಡುತ್ತಿದ್ದಾರೆ. ಏನೇ ಆಗಲಿ ನಮ್ಮ ದೇಶದ ತಜ್ಞರುಗಳು ಅನೇಕ ಸಲಹೆಗಳನ್ನು ನೀಡುತ್ತಿದ್ದಾರೆ ; ಆದರೆ ಪರಿಸ್ಥಿತಿ ದಿನೇದಿನೇ ಕೆಡುತ್ತಿದೆಯೇ ಹೊರತು ಉತ್ತಮಗೊಳ್ಳುತ್ತಿಲ್ಲವೆಂದು ಪ್ರತಿಯೊಬ್ಬರಿಗೂ ಅನುಭವವಾಗುತ್ತಿದೆ : ಈ ರೀತಿ ಆಗಲು ಕಾರಣವೇನು ? ನಾವು ಹೋಗುತ್ತಿರುವ ಮಾರ್ಗದಲ್ಲಿ ಏನಾದರೂ ದೋಷವಿದೆಯೇ ? ಎಂಬ ವಿಚಾರವನ್ನು ಪ್ರತಿಯೊಬ್ಬ ಪ್ರಜೆಯೂ ಯೋಚಿಸಬೇಕಾದುದು ಅವಶ್ಯಕ.

ಆಹಾರದ ಅಭಾವಕ್ಕೆ ಸರ್ಕಾರದವರು ಕೊಡುವ ಕಾರಣವೆಂದರೆ, ಭಾರತ ದೇಶದಲ್ಲಿ ಜನಸಂಖ್ಯೆ ವಿಪರೀತವಾಗುತ್ತಿದೆ. ಆದರಿಂದ ಹೆಚ್ಚಾಗಿ ಬೆಳೆ ಆಗುತ್ತಿದ್ದರೂ ಕೂಡ ಏರುತ್ತಿರುವ ಜನಸಂಖ್ಯೆಗೆ ಸಾಲದಾಗುತ್ತದೆ ; ಮತ್ತೆ ಆಧುನಿಕ ರೀತಿಯ ಬೇಸಾಯವನ್ನು ಮಾಡಿದಲ್ಲಿ ಇನ್ನೂ ಹೆಚ್ಚು ಬೆಳೆ ತೆಗೆಯಬಹುದು : ಇದಕ್ಕೆ ಸೂಚಿಸುವ ಪರಿಹಾರವೆಂದರೆ 'ಕುಟುಂಬ ಯೋಜನೆ' : ಹೆಚ್ಚಿಗೆ ಮಕ್ಕಳಾಗದಂತೆ ಮಾಡಿದಲ್ಲಿ ಸಾಪೇಕ್ಷವಾಗಿ ಜನಸಂಖ್ಯೆ ಕಡಮೆಯಾಗುತ್ತದೆ, ಹಾಗೂ ಆಹಾರ ಸಮಸ್ಯೆ ಪರಿಹಾರವಾಗುತ್ತದೆ, ಎಂಬ ತತ್ವವನ್ನು ಅನುಸರಿಸಿ, ಎಲ್ಲಾ ಕಡೆಯಲ್ಲಿಯೂ ಕುಟುಂಬ ಯೋಜನೆಯ ಅಧಿಕಾರಿಗಳನ್ನು ನೇಮಿಸಿ ಆ ಇಲಾಖೆಗೆ ಕೋಟ್ಯಾಂತರ ರೂಗಳನ್ನು ಖರ್ಚು ಮಾಡುತ್ತಿದೆ ; ಈ ಮಾರ್ಗದಿಂದ ಆಹಾರ ಅಭಾವ ಪರಿಹಾರವಾಗುತ್ತದೆಯೇ ? ಎಂಬ ವಿಚಾರವಾಗಿ ನಾವು ಯೋಚನೆ ಮಾಡೋಣ.

[ಮುಂದುವರಿಯುವುದು]



ವುಡ್‌ಲ್ಯಾಂಡ್ಸ್ - ದಿಗ್ವಿಜಯ 8 ನೇ ವಾರ

ಜಾನ್‌ವರ್ Janwar

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವಿರಾಜ್, ರಾಜೇಂದ್ರನಾಥ್ ಅಭಿನಯಿಸಿರುವ
ಸುಂದರ ದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು
ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮೆನ್ ಕಲರ್ ಹಿಂದೀ ಚಿತ್ರ
ಪ್ರತಿ ದಿನ 3 ಪ್ರದರ್ಶನಗಳು

ಅಪೆರ— ಜನಪ್ರಿಯ 3 ನೇ ವಾರ

ವಾರ್ನರ್ ಥಿಯೇಟರ್ಸ್‌ನವರ 100 ನೇ ಅಮೋಘ ತಮಿಳು ಚಿತ್ರ

ವಲವನಕ್ಕು ವಲವನ್

ನಟವರ್ಗ— ಜೆಮಿನಿ ಗಣೇಶ್, ಸಾವಿತ್ರಿ, ತಂಗವೇಲು, ಅಶೋಕ್
ವೈಜಯಂತಿಮಾಲಾ ವಿಶೇಷ ಆಕರ್ಷಣೆ [ಪ್ರತಿ ದಿನ 3 ಆಟಗಳು]

Edited, Printed & Published by Dharma prachara niratha
M S Krishna Rao (Proprietor) at the Satyavadi Press
Chamarajapuram, Mysore 1

SHAKTI
SUDHA

A Superb Tonic